# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (392)349

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶಗೌಡ ( ವಿಧಾನ ಸಭೆಯಿಂದ ಚುನಾಯಿತಾದವರು)

ಉತ್ತರಿಸುವ ದಿನಾಂಕ : 23.09.2020

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋವಿಡ್ ಕಾರಣದಿಂದ ಕುಂಠಿತಗೊಂಡಿರುವ ರಾಜ್ಯದ ಕೃಷಿ ಮತ್ತು ಕೃಷಿಕರ ಸಂಕಷ್ಟಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು) | ಹೌದು. 2020-21 ನೇ ಸಾಲಿನಲ್ಲಿ ಕೋವಿಡ್ -19 ಲಾಕ್ ಡೌನ್ ಸಮಸ್ಯೆಯಿಂದ ಸಂಕಷ್ಟಕ್ಕೆ ಒಳಗಾಗಿರುವ 2019-20 ನೇ ಸಾಲಿನಲ್ಲಿ ಮುಸುಕಿನ ಜೋಳ ಬೆಳೆದ ರೈತರಿಗೆ ರೂ. 5000 ರಂತೆ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮಾಡಲಾಗುತ್ತಿದೆ. ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗುತ್ತಿರುವ ಮಾನದಂಡಗಳು:<br>1) ಬೆಳೆ ಸಮೀಕ್ಷೆ ತಂತ್ರಾಂಶದಲ್ಲಿ ನೊಂದಣಿಯಾಗಿರುವ ಮುಸುಕಿನ ಜೋಳ ಬೆಳೆಗಾರರನ್ನು ಮಾತ್ರ ಪರಿಗಣಿಸಲಾಗುವುದು.<br>2) 2019-20 ನೇ ಸಾಲಿನಲ್ಲಿ ಒಂದು ಹಂಗಾಮಿಗೆ ಸೀಮಿತಗೊಳಿಸಿ ರೂ.5000 ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ (DBT)ಮೂಲಕ ಫಲಾನುಭವಿ ಖಾತೆಗೆ ಜಮೆ ಮಾಡಲಾಗುವುದು.<br>3) ಜಂಟಿ ಖಾತೆ ಹೊಂದಿದಲ್ಲಿ, FRUITS ತಂತ್ರಾಂಶದಲ್ಲಿ ನೊಂದಾಯಿಸಿದ ರೈತರು ಕೇವಲ ಒಬ್ಬ ರೈತರಿಗೆ ಆರ್ಥಿಕ ನೆರವು ವರ್ಗಾವಣೆಗೆ, ಉಳಿದ ಖಾತೆದಾರರಿಂದ ಒಪ್ಪಿಗೆ ಪತ್ರವನ್ನು ನೋಟರಿಯಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.<br>4) ಪೌತಿ ಪ್ರಕರಣಗಳಲ್ಲಿ ತಮ್ಮ ಹೆಸರಿನಲ್ಲಿ ಜಮೀನು ಇಲ್ಲದೆ ತಮ್ಮ ಪೂರ್ವಜರ ಹೆಸರಿನಲ್ಲಿ ಜಮೀನು ಇರುವ ರೈತರು ಗ್ರಾಮ ಲೆಕ್ಕಾಧಿಕಾರಿಗಳಿಂದ Certificate of succession (ವಂಶ ವೃಕ್ಷ/ವಾರಸುದಾರರ ಪ್ರಮಾಣ ಪತ್ರ) ಹಾಗೂ ಇತರೆ ಕುಟುಂಬ ಸದಸ್ಯರಿಂದ ನಿರಾಕ್ಷೇಪಣಾ ಪತ್ರವನ್ನು ನೀಡುವುದು.<br>ಇಲ್ಲಿಯವರೆಗೆ 719519 ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ಒದಗಿಸಲಾಗಿದೆ. ಪ್ರತಿ ರೈತರಿಗೆ ರೂ. 5000 ರಂತೆ, ಒಟ್ಟು ರೂ. 359.76 ಕೋಟಿಗಳ ಆರ್ಥಿಕ ನೆರವನ್ನು ಒದಗಿಸಲಾಗಿದೆ. |

| | | |
|---|---|---|
| | | 2020-21 ನೇ ಸಾಲಿನಲ್ಲಿ ಕೋವಿಡ್-19 ಹಿನ್ನಲೆಯಲ್ಲಿ ರಾಜ್ಯದ ಕೃಷಿ ಕಾರ್ಮಿಕರಿಗೆ ಹಾಗೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕ್ರಮವಾಗಿ ಉದ್ಯೋಗಾವಕಾಶ ಹಾಗೂ ರೈತರು ತಮ್ಮ ಜಮೀನುಗಳಲ್ಲಿ ಸ್ಥಳದಲ್ಲಿಯೇ ನೀರು ಇಂಗಿಸುವ ಕಾಮಗಾರಿಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು ನೆರವಾಗುವ ಉದ್ದೇಶದೊಂದಿಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯಡಿ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಪ್ರಮುಖವಾಗಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳು ಹಾಗೂ ವ್ಯಕ್ತಿಗತ ಫಲಾನುಭವಿಯಾಧಾರಿತ ಕಾಮಗಾರಿಗಳಾದ ಕಂದಕದೊಂದಿಗೆ ಬದು ಹಾಗೂ ಮೆಟ್ಟಿಲು ಕೃಷಿ ಹೊಂಡಗಳಿಗೆ ಆದ್ಯತೆ ನೀಡಿ ಅನುಷ್ಠಾನಗೊಳಿಸಲಾಗಿದೆ.<br>ಪ್ರಸಕ್ತ ಸಾಲಿನಲ್ಲಿ ಆಗಸ್ಟ್ 2020 ಮಾಹೆಯ ಅಂತ್ಯಕ್ಕೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯಡಿ 48775 ಹೆಕ್ಟೇರ್‌ಗಳಲ್ಲಿ ಕಂದಕದೊಂದಿಗೆ ಬದು ನಿರ್ಮಾಣ, 11486 ಮೆಟ್ಟಿಲು ಕೃಷಿ ಹೊಂಡ 1.99 ಲಕ್ಷ ತೋಟಗಾರಿಕೆ ಸಸಿಗಳನ್ನು ಮತ್ತು 26 ಎರೆ ಹುಳು ತೊಟ್ಟಿ ಹಾಗೂ ಇತರೆ ಕಾಮಗಾರಿಗಳಾದ ಕೃಷಿ ಅರಣ್ಯೀಕರಣ, ಬೋಲ್ಡರ್ ಬದು, ಅಲ್ಪ ಆಳದ ಬಾವಿ, ನೀರು ದಾರಿ, ತೊಟ್ಟಿಲು ಗುಂಡಿ ಮತ್ತು ತಿರುವುಗಾಲುವೆಗಳನ್ನು ಅನುಷ್ಠಾನ ಮಾಡಲಾಗಿದೆ.<br>2020-21ನೇ ಸಾಲಿನಲ್ಲಿ ಮೇಲಿನ ಕಾಮಗಾರಿ / ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಆಗಸ್ಟ್ 2020 ಮಾಹೆಯ ಅಂತ್ಯಕ್ಕೆ ಒಟ್ಟು ರೂ.209.24 ಕೋಟಿಗಳ ವೆಚ್ಚ ಭರಿಸಿ ಒಟ್ಟು 75.66 ಲಕ್ಷ ಮಾನವ ದಿನಗಳನ್ನು ಸೃಜಿಸಿ ಪ್ರಗತಿಯನ್ನು ಸಾಧಿಸಲಾಗಿದೆ. |
| ಅ) | ರಾಜ್ಯದ ರೈತರ ಕ್ಷೇಮಾಭಿವೃದ್ಧಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಕೃಷಿ ಮಾರುಕಟ್ಟೆ ಸುಧಾರಣೆಗೆ ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; (ವಿವರ ನೀಡುವುದು) | ರಾಜ್ಯದ ರೈತರ ಕ್ಷೇಮಾಭಿವೃದ್ಧಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಕೃಷಿ ಮಾರುಕಟ್ಟೆ ಸುಧಾರಣೆಗೆ ಕೃಷಿ ಮಾರಾಟ ಇಲಾಖೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ.<br>**1.ವಾರ್ಷಿಕ ಕ್ರಿಯಾ ಯೋಜನೆ:** - ಮಾರುಕಟ್ಟೆ ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಹಾಲಿ ಇರುವ ಸೌಲಭ್ಯಗಳನ್ನು ವ್ಯಾಪಾರ ವಹಿವಾಟಿಗೆ |

ಅನುಗುಣವಾಗಿ ಮೇಲ್ದರ್ಜೆಗೇರಿಸಲು ಸಮಿತಿಗಳ ನಿಧಿಯಿಂದ ಖರ್ಚು ಮಾಡಲಾಗುತ್ತದೆ. ಪ್ರತಿ ವರ್ಷ ಮಾರುಕಟ್ಟೆ ಸಮಿತಿಗಳು ಕೈಗೊಳ್ಳಬೇಕಾದ ಕಾಮಗಾರಿಗಳು ಹಾಗೂ ಲಭ್ಯವಿರುವ ಮಾರುಕಟ್ಟೆ ನಿಧಿ ಮತ್ತು ಅನುದಾನದ ಲಭ್ಯತೆ ಬಗ್ಗೆ ಪರಿಶೀಲಿಸಿಕೊಂಡು ವಾರ್ಷಿಕ ಕ್ರಿಯಾ ಯೋಜನೆ ರೂಪಿಸಿ, ಕೃಷಿ ಮಾರಾಟ ನಿರ್ದೇಶಕರಿಂದ ಅನುಮೋದನೆ ಪಡೆದು, ನಿಯಾಮನುಸಾರ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

**2. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ):**
ಇದು ಕೇಂದ್ರ ಸರ್ಕಾರದ ಅನುದಾನವಾಗಿರುತ್ತದೆ. ಕೃಷಿ ಇಲಾಖೆಯನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಲಾಗಿದ್ದು, ಕೃಷಿ ಇಲಾಖೆಯಿಂದ ಕೃಷಿ ಮಾರಾಟ ಇಲಾಖೆಗೆ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಒದಗಿಸುವ ಅನುದಾನದಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

**3. ನಬಾರ್ಡ್ ಯೋಜನೆ (ಆರ್.ಐ.ಡಿ.ಎಫ್/ಡಬ್ಲ್ಯೂ.ಐ.ಎಫ್):** ಈ ಯೋಜನೆಯನ್ನು ಸಚಿವ ಸಂಪುಟದ ಉಪ ಸಮಿತಿ ಸಭೆಯು ಪ್ರತಿ ವರ್ಷ ರಾಜ್ಯ ಸರ್ಕಾರವು ನಬಾರ್ಡ್‌ನಿಂದ ಅಭಿವೃದ್ಧಿ ಕಾಮಗಾರಿಗಳಿಗೆ ತೆಗೆದುಕೊಳ್ಳುವ ಸಾಲದ ಮೊತ್ತವನ್ನು ಕೃಷಿ ಮಾರಾಟ ಇಲಾಖೆಗೆ ಹಂಚಿಕೆಯಾದ ಅನುದಾನದ ಲಭ್ಯತೆಗನುಸಾರವಾಗಿ ಸಂಬಂಧಪಟ್ಟ ಸಮಿತಿಗಳಿಗೆ ಅನುದಾನವನ್ನು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಹಕಾರ ಸಚಿವರ ಅನುಮೋದನೆ ಪಡೆದು ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

**4.ಹಿಂದುಳಿದ ಕೃಷಿ ಉತ್ಪನ್ನ ಮಾರುಕಟ್ಟೆಗಳಿಗೆ ಮೂಲಭೂತ ಸೌಲಭ್ಯ ಸೃಜನೆ ಯೋಜನೆ:** ಪ್ರತಿ ವರ್ಷ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಹಿಂದುಳಿದ ಕೃಷಿ ಉತ್ಪನ್ನ ಮಾರುಕಟ್ಟೆಗಳಿಗೆ ಮೂಲಭೂತ ಸೌಲಭ್ಯ ಸೃಜನೆ ಯೋಜನೆಯಲ್ಲಿ ಆಯವ್ಯಯ ಅವಕಾಶ ಒದಗಿಸುತ್ತಿದ್ದು, ಹಿಂದುಳಿದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಸರ್ಕಾರವು ನೀಡಿರುವ ಮಾರ್ಗಸೂಚಿ ಮೇರೆಗೆ ಅನುದಾನವನ್ನು ವಿನಿಯೋಗಿಸಲಾಗುತ್ತದೆ.

| | | |
|---|---|---|
| | | **5.ಕನಿಷ್ಠ ಬೆಂಬಲ ಬೆಲೆ ಯೋಜನೆ:** ರೈತರ ಕೃಷಿ ಉತ್ಪನ್ನಗಳ ಧಾರಣೆ ಕುಸಿದಾಗ ರೈತರು ಸಂಕಷ್ಟಕ್ಕೆ ಒಳಗಾಗಿ ಕಡಿಮೆ ದರಕ್ಕೆ ಮಾರಾಟ ಮಾಡುವುದನ್ನು ತಪ್ಪಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.<br><br>ಕೇಂದ್ರ ಸರ್ಕಾರವು ನಿಗಧಿಪಡಿಸುವ ಬೆಂಬಲ ಬೆಲೆಗಿಂತ ಕೃಷಿ ಉತ್ಪನ್ನಗಳ ಧಾರಣೆಯು ಕಡಿಮೆ ಆದಲ್ಲಿ, ರೈತರ ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವುದು.<br><br>ರಾಜ್ಯದಲ್ಲಿ ಪ್ರಸ್ತುತ 162 ಮುಖ್ಯ ಮಾರುಕಟ್ಟೆ ಮತ್ತು 352 ಉಪ ಮಾರುಕಟ್ಟೆಗಳಿವೆ.<br><br>ಎಪಿಎಂಸಿ ಪ್ರಾಂಗಣಗಳಲ್ಲಿ ಅನೇಕ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಇದರಲ್ಲಿ 1539 ಸಂಖ್ಯೆಯ ಮುಚ್ಚು ಹರಾಜುಕಟ್ಟೆಗಳು, 217 ಸಂಖ್ಯೆ ಆಡಳಿತ ಕಛೇರಿ, 5547 ಸಂಖ್ಯೆಯ 9,18,011 ಮೆ.ಟನ್ ಸಾಮರ್ಥ್ಯದ ಗೋದಾಮು/ ಅಂಗಡಿ-ವ-ಗೋದಾಮುಗಳು, 130 ಸಂಖ್ಯೆ ರೈತಭವನ, 33 ಸಂಖ್ಯೆ ಬೃಹತ್ ತೂಕದ ಯಂತ್ರ, 2872 ಸಂಖ್ಯೆ ಸಣ್ಣ ಮಳಿಗೆಗಳು, 29,49,807 ಚ.ಮೀ. ಆಂತರಿಕ ರಸ್ತೆ, 52 ಸಂಖ್ಯೆ ಕುರಿ ಮತ್ತು ಮೇಕೆ ಮಾರುಕಟ್ಟೆ ಸಂತೆ, 61 ಸಂಖ್ಯೆ ಧಾನ್ಯಗಳ ಶುದ್ಧೀಕರಣ ಘಟಕ, 05 ಸಂಖ್ಯೆ ಶೀತಲ ಗೃಹ, 169 ಸಂಖ್ಯೆ ಶುದ್ಧ ಕುಡಿಯುವ ನೀರಿನ ಘಟಕ, 02 ಸಂಖ್ಯೆ ಈರುಳ್ಳಿ ಗೋದಾಮು, 23 ಸಂಖ್ಯೆ ಅಸ್ಸೆಯಿಂಗ್ ಲ್ಯಾಬ್, 666 ಗ್ರಾಮೀಣ ಸಂತೆ ಇತ್ಯಾದಿ ಸೇರಿವೆ. |
| ಇ) | ರಾಜ್ಯದಾದ್ಯಂತ ಕೃಷಿಯಿಲ್ಲದೇ ಹಾಳುಬಿದ್ದ ವ್ಯವಸಾಯ ಭೂಮಿಗಳ ಪುನರಾಭಿವೃದ್ಧಿಗೆ ಸರ್ಕಾರ ಯಾವ ಯಾವ ವಿನೂತನ ಯೋಜನೆ ಹಮ್ಮಿಕೊಳ್ಳಲಿದೆ; (ವಿವರ ನೀಡುವುದು) | ಪ್ರಸಕ್ತ ಸಾಲಿನಲ್ಲಿ ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. |
| ಈ) | ಕೋವಿಡ್ ಕಾರಣದಿಂದ ಪದವೀಧರ ಯುವಕರು ಮತ್ತೆ ಕೃಷಿಯತ್ತ ಮುಖ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ | ಕೋವಿಡ್ ಕಾರಣದಿಂದ 2020-21 ನೇ ಸಾಲಿಗೆ ಸಾಂಸ್ಥಿಕ ತರಬೇತಿಗಳ ಬದಲಾಗಿ, ಕೃಷಿ ಹಾಗೂ ಕೃಷಿ ಸಂಬಂಧಿತ ವಿಷಯಗಳ ಬಗ್ಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಿಂದ Online ತರಬೇತಿಗಳನ್ನು ನಡೆಸಲಾಗುತ್ತಿದೆ. |

| | | |
|---|---|---|
| | ಯುವಕರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸರ್ಕಾರದ ಯಾವ ತರಬೇತಿ ಕಾರ್ಯಕ್ರಮ ರೂಪಿಸಲಿದೆ? | ಇಲ್ಲಿಯವರೆಗೂ 323 Online ತರಬೇತಿಗಳನ್ನು ಆಯೋಜಿಸಿದ್ದು 13792 ರೈತರು ಹಾಗೂ ವಿಸ್ತರಣಾಧಿಕಾರಿಗಳು ಭಾಗವಹಿಸಿರುತ್ತಾರೆ.. |

ಸಂಖ್ಯೆ: AGRI-AML-164/2020

(ಬಿ.ಸಿ.ಪಾಟೀಲ್)
ಕೃಷಿ ಸಚಿವರು